**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು**

**ಸಿಸಿ ನಂ. 532/2023**

| | | |
|---|---|---|
| ಹೆಸರು | ನಾರಾಯಣಸ್ವಾಮಿ | **ಚಾಸಾ-2 ಪ್ರಾಸಾ-1** |
| ತಂದೆಯ ಹೆಸರು | ಮುನಿಪಾಪಯ್ಯ | **ಸಾಕ್ಷಿಯನ್ನು ದಿಃ 24.04.2024 ರಂದು ಪ್ರಮಾಣೀಕರಿಸಲಾಯಿತು.** |
| ವಯಸ್ಸು | 42 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಕಡದನಹಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು, ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ನಾನು ಮಾಲೂರಿಗೆ ಬಂದಿದ್ದೆ, ಪೊಲೀಸರು ಸಹಿ ಹಾಕಿ ಎಂದರು ಅದಕ್ಕೆ ನಾನು ಸಹಿ ಹಾಕಿದೆ. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದಃ**

ದಿಃ25.03.2023 ರಂದು ನಾನು ಮತ್ತು ಚಾಸಾ.3 ರವರು ನಮ್ಮ ಸ್ವಂತ ಕೆಲಸದ ನಿಮಿತ್ತ ಮಾಲೂರು ಪೊಲೀಸ್ ಠಾಣೆ ಬಳಿ ಬಂದಿದ್ದಾಗ ಮದ್ಯಾಹ್ನ ಸುಮಾರು 1.30 ಕ್ಕೆ ಬಂದಿದ್ದಾಗ ಚಾಸಾ.1 ಮತ್ತು ಚಾಸಾ.6 ರವರು ನಮ್ಮನು ಕರೆದು ನಿಮ್ಮ ಊರಿನವರಾದ ಆಂಜಿನಪ್ಪ ಎಂಬುವರ ಚಿಲ್ಲರೆ ಅಂಗಡಿಯಲ್ಲಿ ಅಕ್ರಮ ಮದ್ಯದ ಪ್ಯಾಕೇಟುಗಳನನ್ನಿಟ್ಟುಕೊಂಡು ಮಾರಾಟ

ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ದಾಳಿಗೆ ಸಹಕರಿಸಬೇಕೆಂದು ನಮ್ಮನ್ನು ಕೋರಿ ಪೊಲೀಸ್ ನೋಟೀಸ್ ನೀಡಿದರು ಎಂದರೆ ಸರಿಯಲ್ಲ. ನಾವು ನೋಟೀಸನ್ನು ಪಡೆದು ಪಂಚರಾಗಲು ಒಪ್ಪಿ ಸರ್ಕಾರಿ ಜೀಪ್ ಸಂಖ್ಯೆ ಕೆ.ಎ.07 ಜಿ. 0663 ಮಧ್ಯಾಹ್ನ 1.45 ಕ್ಕೆ ಮಾಲೂರು ಬಿಟ್ಟು ಆಂಜಿನಪ್ಪ ನವರ ಚಿಲ್ಲರೆ ಅಂಗಡಿಯ ಬಳಿ ಹೋಗಿ ನೋಡಲಾಗಿ ಅವರು ಅಂಗಡಿಯಲ್ಲಿದ್ದು ಆತನ ಹೆಸರು, ವಿಳಾಸ ಕೇಳಿ ತಿಳಿದುಕೊಂಡಿದ್ದು ನಮ್ಮ ಸಮಕ್ಷಮ ಸದರಿ ಅಂಗಡಿಯ್ನು ಪರಿಶೀಲನೆ ಮಾಡಲು ಪೊಲೀಸ್ ನೋಟೀಸ್ ನೀಡಿ ನಂತರ ಅಂಗಡಿಯನ್ನು ಪರಿಶೀಲನೆ ಮಾಡಲಾಗಿ ಅಂಗಡಿಯಲ್ಲಿ ಪಶ್ಚಿಮ ದಿಕ್ಕಿನಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ತೆರೆದು ನೋಡಲಾಗಿ ಬೆಂಗಳೂರು ವಿಸ್ಕಿ 180 ಎಂ.ಎಲ್.ನ 10 ಟೆಟ್ರಾ ಪ್ಯಾಕೆಟ್ಗಳು, ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ 90 ಎಂ.ಎಲ್.ನ 22 ಮಧ್ಯದ ಟೆಟ್ರಾ ಪ್ಯಾಕೆಟ್ಗಳು ಇದ್ದು ಇವುಗಳು ಒಟ್ಟು 3.780 ಮಿಲೀ ಲೀಟರ್ ಇದ್ದು ಈ ಮಧ್ಯವನ್ನು ಮಾರಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಲಾಗಿ ತನ್ನ ಬಳಿ ಯಾವುದೇ ಲೈಸೆನ್ಸ್ ಇಲ್ಲ ಎಂದು ಹಾಗೂ ಅಕ್ರಮವಾಗಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಪೊಲೀಸರು ಈ ಬಗ್ಗೆ ನಿಪಿ.1 ನ್ನು ಜರುಗಿಸಿ ಟೆಟ್ರಾ ಪ್ಯಾಕೆಟ್ಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ದಾರದಲ್ಲಿ ಕಟ್ಟಿ ಸೀಲು ಮಾಡಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಇದರ ಒಟ್ಟು ಬೆಲೆ 1,330/- ರೂ.ಗಳು ಬೆಲೆ ಬಾಳುವುದು ಎಂದು ಅಂದಾಜು ಪಡಿಸಿದರು ಎಂದರೆ ಸರಿಯಲ್ಲ. ನಿಪಿ.1 ನ್ನು ಮಧ್ಯಾಹ್ನ 2.25 ರಿಂದ 3.25 ರವರೆಗೆ ಜರುಗಿಸಿ ಅಲ್ಲೇ ಇದ್ದ ಲ್ಯಾಪ್ ಟಾಪ್ ಸಹಾಯದಿಂದ ನಿಪಿ.1 ನ್ನು ಜರುಗಿಸಿ ನಾನು ನಿಪಿ.1 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಾಲನ್ನು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಅದೇ ದಿನ ನಾನು ಠಾಣೆಗೆ ಹಾಜರಾಗಿ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಊರಿನವರಾದ ಕಾರಣ ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**Sd/-**

2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು**

**ಸಿಸಿ ನಂ. 532/2023**

| | | |
|---|---|---|
| ಹೆಸರು | ಸುನಿಲ್ | **ಚಾಸಾ-3 ಪ್ರಾಸಾ-2** |
| ತಂದೆಯ ಹೆಸರು | ನಾಗರಾಜ್ | **ಸಾಕ್ಷಿಯನ್ನು ದಿಃ 24.04.2024 ರಂದು ಪ್ರಮಾಣೀಕರಿಸಲಾಯಿತು.** |
| ವಯಸ್ಸು | 33 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಕಡದನಹಳ್ಳಿ | |

**ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು, ನಮ್ಮ ಊರಿನವರು. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ನಾನು ಮಾಲೂರಿಗೆ ಬಂದಿದ್ದೆ, ಪೊಲೀಸರು ಸಹಿ ಹಾಕಿ ಎಂದರು ಅದಕ್ಕೆ ನಾನು ಸಹಿ ಹಾಕಿದೆ. ಸಾಕ್ಷಿಯು ನಿಪಿ.1 ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ಅವರಿಂದಃ**

ದಿಃ25.03.2023 ರಂದು ನಾನು ಮತ್ತು ಚಾಸಾ.3 ರವರು ನಮ್ಮ ಸ್ವಂತ ಕೆಲಸದ ನಿಮಿತ್ತ ಮಾಲೂರು ಪೊಲೀಸ್ ಠಾಣೆ ಬಳಿ ಬಂದಿದ್ದಾಗ ಮದ್ಯಾಹ್ನ ಸುಮಾರು 1.30 ಕ್ಕೆ ಬಂದಿದ್ದಾಗ ಚಾಸಾ.1 ಮತ್ತು ಚಾಸಾ.6 ರವರು ನಮ್ಮನು ಕರೆದು ನಿಮ್ಮ ಊರಿನವರಾದ ಆಂಜಿನಪ್ಪ ಎಂಬುವರ ಚಿಲ್ಲರೆ ಅಂಗಡಿಯಲ್ಲಿ ಅಕ್ರಮ ಮದ್ಯದ ಪ್ಯಾಕೇಟುಗಳನ್ನಿಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ದಾಳಿಗೆ ಸಹಕರಿಸಬೇಕೆಂದು ನಮ್ಮನ್ನು ಕೋರಿ ಪೊಲೀಸ್ ನೋಟೀಸ್ ನೀಡಿದರು ಎಂದರೆ ಸರಿಯಲ್ಲ. ನಾವು ನೋಟೀಸನ್ನು ಪಡೆದು ಪಂಚರಾಗಲು ಒಪ್ಪಿ ಸರ್ಕಾರಿ ಜೀಪ್ ಸಂಖ್ಯೆ ಕೆ.ಎ.07 ಜಿ. 0663 ಮದ್ಯಾಹ್ನ 1.45 ಕ್ಕೆ ಮಾಲೂರು

ಬಿಟ್ಟು ಆಂಜಿನಪ್ಪ ನವರ ಚಿಲ್ಲರೆ ಅಂಗಡಿಯ ಬಳಿ ಹೋಗಿ ನೋಡಲಾಗಿ ಅವರು ಅಂಗಡಿಯಲ್ಲಿದ್ದು ಆತನ ಹೆಸರು, ವಿಳಾಸ ಕೇಳಿ ತಿಳಿದುಕೊಂಡಿದ್ದು ನಮ್ಮ ಸಮಕ್ಷಮ ಸದರಿ ಅಂಗಡಿಯ್ನು ಪರಿಶೀಲನೆ ಮಾಡಲು ಪೊಲೀಸ್ ನೋಟೀಸ್ ನೀಡಿ ನಂತರ ಅಂಗಡಿಯನ್ನು ಪರಿಶೀಲನೆ ಮಾಡಲಾಗಿ ಅಂಗಡಿಯಲ್ಲಿ ಪಶ್ಚಿಮ ದಿಕ್ಕಿನಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ತೆರೆದು ನೋಡಲಾಗಿ ಬೆಂಗಳೂರು ವಿಸ್ಕಿ 180 ಎಂ.ಎಲ್.ನ 10 ಟೆಟ್ರಾ ಪ್ಯಾಕೆಟ್ಗಳು, ಹೈವಾರ್ಡ್ಸ್ ಚಿಯರ್ಸ್ ವಿಸ್ಕಿ 90 ಎಂ.ಎಲ್.ನ 22 ಮದ್ಯದ ಟೆಟ್ರಾ ಪ್ಯಾಕೆಟ್ಗಳು ಇದ್ದು ಇವುಗಳು ಒಟ್ಟು 3.780 ಮಿಲೀ ಲೀಟರ್ ಇದ್ದು ಈ ಮದ್ಯವನ್ನು ಮಾರಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಲಾಗಿ ತನ್ನ ಬಳಿ ಯಾವುದೇ ಲೈಸೆನ್ಸ್ ಇಲ್ಲ ಎಂದು ಹಾಗೂ ಅಕ್ರಮವಾಗಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಪೊಲೀಸರು ಈ ಬಗ್ಗೆ ನಿಪಿ.1 ನ್ನು ಜರುಗಿಸಿ ಟೆಟ್ರಾ ಪ್ಯಾಕೆಟ್ಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ದಾರದಲ್ಲಿ ಕಟ್ಟಿ ಸೀಲು ಮಾಡಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಇದರ ಒಟ್ಟು ಬೆಲೆ 1,330/- ರೂ.ಗಳು ಬೆಲೆ ಬಾಳುವುದು ಎಂದು ಅಂದಾಜು ಪಡಿಸಿದರು ಎಂದರೆ ಸರಿಯಲ್ಲ. ನಿಪಿ.1 ನ್ನು ಮದ್ಯಾಹ್ನ 2.25 ರಿಂದ 3.25 ರವರೆಗೆ ಜರುಗಿಸಿ ಅಲ್ಲೇ ಇದ್ದ ಲ್ಯಾಪ್ ಟಾಪ್ ಸಹಾಯದಿಂದ ನಿಪಿ.1 ನ್ನು ಜರುಗಿಸಿ ನಾನು ನಿಪಿ.1 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಾಲನ್ನು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಅದೇ ದಿನ ನಾನು ಠಾಣೆಗೆ ಹಾಜರಾಗಿ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ಆರೋಪಿ ನಮ್ಮ ಊರಿನವರಾದ ಕಾರಣ ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು